# ಮಕ್ಕಳಿಗೂ ಎಚ್‌ಐವಿ ಸೋಂಕು!

ಗರ್ಭಿಣಿ ತಾಯಿಗೇ ತನಗೆ ಎಚ್‌ಐವಿ ಸೋಂಕು ಇದೆ ಎನ್ನುವುದು ಗೊತ್ತಿರುವುದಿಲ್ಲ. ಅಮಾಯಕ ಕಂದಮ್ಮಗಳು ಇದರಿಂದ ಸಂಕಷ್ಟಕ್ಕೆ ತುತ್ತಾಗುತ್ತವೆ. ಅಂಗನವಾಡಿಗಳಲ್ಲಿ, ಶಾಲೆಗಳಲ್ಲಿ ಈ ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರ ಯಾವುದಕ್ಕೂ ಸಾಲುವುದಿಲ್ಲ. ಜತೆಗೆ ಬಾಲ್ಯದಲ್ಲಿಯೇ ಎಚ್‌ಐವಿ ಸೋಂಕು ತಗಲಿದ್ದು ಗೊತ್ತಾದರೆ ಇನ್ನಷ್ಟು ಸಾಮಾಜಿಕ ಸಮಸ್ಯೆಗಳನ್ನು ಈ ಮಕ್ಕಳು ಎದುರಿಸಬೇಕಾಗುತ್ತದೆ.

ರಾಜ್ಯದಲ್ಲಿ ಸುಮಾರು 14500 ಮಕ್ಕಳು ಎಚ್‌ಐವಿ ಸೋಂಕಿಗೆ ತುತ್ತಾಗಿದ್ದಾರೆ ಎಂಬ ಕಳವಳಕಾರಿ ಅಂಶ ಬಹಿರಂಗಗೊಂಡಿದೆ. ಅದರಲ್ಲೂ ಸುಮಾರು 4500 ಮಕ್ಕಳು ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟೆ, ರಾಯಚೂರು, ಕೊಪ್ಪಳ ಮತ್ತು ವಿಜಾಪುರ ಜಿಲ್ಲೆಗಳಿಗೆ ಸೇರಿದವರು ಎನ್ನುವುದು ನಮ್ಮ ಆರೋಗ್ಯ ವ್ಯವಸ್ಥೆಯ ಅಸಮಾನ ಕಾರ್ಯನಿರ್ವಹಣೆಗೂ ಕೈಗನ್ನಡಿ ಹಿಡಿದಿದೆ. ಪೋಷಕರು ದಡ್ಡತನ, ಬೇಜವಾಬ್ದಾರಿತನದಿಂದ ಅಥವಾ ಲೈಂಗಿಕ ಸ್ವಚ್ಛಂದತೆಯಿಂದ ಮಾಡಿದ ತಪ್ಪಿಗೆ ನಿಷ್ಪಾಪಿ ಮಕ್ಕಳು ಸೋಂಕು ತಗಲಿಸಿಕೊಂಡು ಬಳಲುತ್ತಿರುವುದು ನಿಜಕ್ಕೂ ಸಂಕಟ ಪಡುವ ವಿಷಯ. ಮಕ್ಕಳ ಹಕ್ಕುಗಳ ಬಗ್ಗೆ ಸಾಕಷ್ಟು ಎಚ್ಚರ ಮೂಡಿರುವ ಈ ದಿನಗಳಲ್ಲಿ ಹೀಗೆ ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವ ಮಕ್ಕಳ ಬಗ್ಗೆ ಸರಕಾರ ವಿಶೇಷ ಕಾಳಜಿಯನ್ನು ತೋರಬೇಕಾಗಿದೆ.

'ಸರ್ಕಾರ ಸುಮ್ಮನೆ ಕುಳಿತಿಲ್ಲ' ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ರಾಜ್ಯದಲ್ಲಿ ಏಡ್ಸ್ ತಡೆ ಸೊಸೈಟಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಜನಜಾಗೃತಿಯ ಮೂಲಕ ಸೋಂಕು ಹರಡದಂತೆ ಕೈಗೊಳ್ಳುವ ಪ್ರಚಾರ ಮತ್ತು ಕ್ರಮಗಳು ಒಂದೆಡೆಯಾದರೆ, ಈಗಾಗಲೆ ಸೋಂಕು ತಗಲಿರುವ ಮಕ್ಕಳಿಗೆ ಚಿಕಿತ್ಸೆ ಕೊಡುತ್ತಿರುವುದು ಇನ್ನೊಂದೆಡೆ ನಡೆದಿದೆ. ಎಚ್‌ಐವಿ ಸೋಂಕು ಇದೆ ಎಂದು ಗೊತ್ತಾದ ತಕ್ಷಣವೇ ಎಲ್ಲ ರೀತಿಯ ತಪಾಸಣೆಗಳನ್ನೂ ಉಚಿತವಾಗಿ ನಡೆಸಲಾಗುತ್ತದೆ. ಇದಕ್ಕಾಗಿ ಪ್ರತಿ ವರ್ಷ ಪ್ರತಿಯೊಬ್ಬ ರೋಗಿಗೆ ಸರಕಾರ 9,500 ರೂಪಾಯಿಗಳನ್ನು ಖರ್ಚು ಮಾಡುತ್ತಿದೆ ಎನ್ನುವುದು ಅಧಿಕಾರಿಗಳು ನೀಡಿರುವ ಅಂಕಿ ಅಂಶ.

ಆದರೆ ಸರ್ಕಾರವೇ ನಡೆಸಿರುವ ಸಮೀಕ್ಷೆಯ ಪ್ರಕಾರ, ಸೋಂಕು ತಗಲಿರುವ ಮಕ್ಕಳಿಗೆ ಪೌಷ್ಟಿಕಾಂಶದ ಕೊರತೆ ಕಾಡುತ್ತಿದೆ. ಸೂಕ್ತ ಪೌಷ್ಟಿಕ ಆಹಾರ ಸೇವಿಸದಿದ್ದರೆ ಎಚ್‌ಐವಿ ಸೋಂಕು ತಡೆಯಲು ಮಾತ್ರೆ, ಔಷಧಿಗಳನ್ನು ಬಳಸುವುದರಿಂದ ಯಾವುದೇ ಪ್ರಯೋಜನ ಆಗುವುದಿಲ್ಲ ಎನ್ನುವುದು ವಾಸ್ತವ. ಹೀಗೆ ಸೋಂಕು ತಗಲಿಸಿಕೊಂಡ ಮಕ್ಕಳಲ್ಲಿ ಸುಮಾರು 6000 ಮಕ್ಕಳು ಪೋಷಕರನ್ನು ಕಳೆದುಕೊಂಡು ಅನಾಥರಾದವರು; ಸುಮಾರು 3500 ಮಕ್ಕಳು ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರನ್ನು ಮಾತ್ರ ಹೊಂದಿದ್ದಾರೆ ಎನ್ನುವುದು ಪರಿಸ್ಥಿತಿಯ ಗಂಭೀರತೆಯನ್ನು ಹೆಚ್ಚಿಸಿದೆ. ಸರ್ಕಾರ ಎಚ್‌ಐವಿ ಸೋಂಕು ತಡೆಗೆ ಹಾಗೂ ಈ ಮಕ್ಕಳ ಚಿಕಿತ್ಸೆಗೆ ಕೈಗೊಂಡಿರುವ ಕ್ರಮಗಳು ನಿರೀಕ್ಷಿತ ಪರಿಣಾಮ ಬೀರುತ್ತಿಲ್ಲ ಎನ್ನುವುದನ್ನು 2011ರ ಅಂಕಿ ಅಂಶಗಳೇ ಎತ್ತಿ ತೋರಿಸುತ್ತಿವೆ. 2011ರ ಜನವರಿಯಿಂದ ಡಿಸೆಂಬರ್‌ವರೆಗೆ ಸೋಂಕು ತಗುಲಿದ ಮಕ್ಕಳ ಪಟ್ಟಿಗೆ ಇನ್ನೂ 1501 ಮಕ್ಕಳು ಸೇರ್ಪಡೆಯಾಗಿದ್ದಾರೆ ಎನ್ನುವುದು ನಿಜಕ್ಕೂ ಕಳವಳಕಾರಿ ಸಂಗತಿ.

ಇದು ಅತ್ಯಂತ ಸೂಕ್ಷ್ಮ ವಿಷಯ. ಕೇವಲ ಸರ್ಕಾರವನ್ನು ಅಥವಾ ಅಧಿಕಾರಿಗಳನ್ನು ದೂರಿ ಪ್ರಯೋಜನವಿಲ್ಲ. ಗರ್ಭಿಣಿ ತಾಯಂದಿರ ಎಚ್‌ಐವಿ ಪರೀಕ್ಷೆ ಮಾಡಬೇಕೆನ್ನುವುದು ಕಡ್ಡಾಯವಲ್ಲ. ಗರ್ಭಿಣಿಯರು ಒಪ್ಪಿಕೊಂಡರೆ ಮಾತ್ರ ಈ ತಪಾಸಣೆ ನಡೆಯುತ್ತದೆ. ವೈದ್ಯರು ಈ ಬಗ್ಗೆ ಕೇವಲ ಸಲಹೆ ನೀಡಬಹುದಷ್ಟೆ. ಹಳ್ಳಿಗಾಡಿನ ಬಡವರ ಪರಿಸ್ಥಿತಿ ಹೇಗಿದೆಯೆಂದರೆ, ಬಹುತೇಕ ಸಂದರ್ಭಗಳಲ್ಲಿ ಗರ್ಭಿಣಿ ತಾಯಿಗೇ ತನಗೆ ಎಚ್‌ಐವಿ ಸೋಂಕು ಇದೆ ಎನ್ನುವುದು ಗೊತ್ತಿರುವುದಿಲ್ಲ. ಅಮಾಯಕ ಕಂದಮ್ಮಗಳು ಇದರಿಂದ ಸಂಕಷ್ಟಕ್ಕೆ ತುತ್ತಾಗುತ್ತವೆ. ಅಂಗನವಾಡಿಗಳಲ್ಲಿ, ಶಾಲೆಗಳಲ್ಲಿ ಈ ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರ ಯಾವುದಕ್ಕೂ ಸಾಲುವುದಿಲ್ಲ. ಜತೆಗೆ ಬಾಲ್ಯದಲ್ಲಿಯೇ ಎಚ್‌ಐವಿ ಸೋಂಕು ತಗಲಿದ್ದು ಗೊತ್ತಾದರೆ ಇನ್ನಷ್ಟು ಸಾಮಾಜಿಕ ಸಮಸ್ಯೆಗಳನ್ನು ಈ ಮಕ್ಕಳು ಎದುರಿಸಬೇಕಾಗುತ್ತದೆ. ಮಕ್ಕಳ ಈ ಸಂಕಟವನ್ನು ತಡೆಯುವಲ್ಲಿ ಆರೋಗ್ಯಕರ ಸಮಾಜದ ಪಾತ್ರವೂ ಮಹತ್ವದ್ದು. ರಾಜ್ಯದ ಆರೋಗ್ಯ ಸಚಿವರು ಈ ನಿಟ್ಟಿನಲ್ಲಿ ಬೆಳಗಾವಿಯಲ್ಲೇ ಅಧಿಕಾರಿಗಳ ಸಭೆ ಕರೆದು ಚರ್ಚೆ ನಡೆಸಿರುವುದು ಸ್ವಾಗತಾರ್ಹ. ಎಚ್‌ಐವಿ ಸೋಂಕು ತಗಲಿದ ಮಕ್ಕಳ ಕಡೆಗೆ ವಿಶೇಷ ಗಮನ ಕೊಟ್ಟು, ಅವರಿಗೆ ಅಂಗನವಾಡಿಯಲ್ಲಿ ಅಥವಾ ಶಾಲೆಗಳಲ್ಲಿ ಹೆಚ್ಚಿನ ಪೌಷ್ಟಿಕ ಆಹಾರ ಒದಗಿಸುವ ಪ್ರಯತ್ನ ನಡೆಯಬೇಕು. ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಸಮೀಪಿಸಿರುವ ರಾಜ್ಯಕ್ಕೆ 14,500 ಮಕ್ಕಳ ಈ ಎಚ್‌ಐವಿ ಸೋಂಕು ನಿಯಂತ್ರಣದ ಕ್ರಮ ದೊಡ್ಡ ಸಮಸ್ಯೆ ಏನಲ್ಲ. ಇನ್ನಷ್ಟು ಮಕ್ಕಳು ಈ ಸೋಂಕು ಅಂಟಿಸಿಕೊಳ್ಳುವ ಮುನ್ನವೇ ಅಧಿಕಾರಿಗಳು, ತೀವ್ರ ನಿಯಂತ್ರಣ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಿದೆ.

**ಬಿ.ಎಂ.ಹನೀಫ್**

